ಸಿಸಿ ನಂಃ 2058/2023

ಸಿ.ಡಬ್ಲೂ 1/ಪಿ.ಡಬ್ಲೂ 1

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ** 2558/2023

ಸಾಕ್ಷಿದಾರರ ಹೆಸರು ಃ ಮಹೇಶ ಶಂಕ್ರಪ್ಪ ದಾಸ್ತಿಕೊಪ್ಪ
ತಂದೆಯ ಹೆಸರು ಃ ಶಂಕ್ರಪ್ಪ
ವಯಸ್ಸು ಃ 18 ವರ್ಷ
ಉದ್ಯೋಗ ಃ ವಿದ್ಯಾರ್ಥಿ
ವಾಸ ಸ್ಥಳ ಃ ಲಿಂಗನಕೊಪ್ಪ ಧಾರವಾಡ

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 10-10-2024**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ದಿಃ 20-03-2023 ರಂದು ಕೆ ಇ ಬೊರ್ಡ ಶಾಲೆಯಲ್ಲಿ ಪಿಯುಸಿ ಪರಿಕ್ಷೆ ಬರೆಯಲು ಬೇಳಿಗ್ಗೆ ಹೋಗಿದ್ದೆನು. ಪರಿಕ್ಷೆ ಮುಗಿಸಿ ಹೋರಗಡೆ ಬಂದಾಗ ಅಂದಾಜು 1.30 ಸಮಯ ಆಗಿತ್ತು ಆಗ ಒಬ್ಬ ಕೆಂಪು ಶರ್ಟ ಹಾಕಿದ ವ್ಯಕ್ತಿ ನನ್ನನ್ನು ಕಾಲೇಜ ಗ್ರೌಂಡ ನಿಂದ ಕಾಲೇಜ ಕಂಪೌಂಡ ಹತ್ತಿರ ಇರುವ ಬೇಕರಿ ಬಾಜು ಕರೆದುಕೊಂಡು ಹೋಗಿದ್ದನು. ಅಲ್ಲಿ ನಮ್ಮೂರಿನ ಶೀವನಗೌಡ ಪಾಟೀಲ,

ಶೀವಾನಂದ ನಾಗಪ್ಪ ಕಮ್ಮಾರ ಇತರ 3 ಜನ ಇದ್ದರು. ಶೀವನಗೌಡ ಪಾಟೀಲ, ಶೀವಾನಂದ ನಾಗಪ್ಪ ಕಮ್ಮಾರ ಇವರಿಬ್ಬರೂ ನನಗೆ ಕೈಯಿಂದ ಕಿವಿಗೆ ಬಲಗೈಯಿಂದ ಹೋಡೆದನು. ಆರೋಪಿತ ನನಗೆ ಮೊದಲು ನನಗೆ ಕಿವಿಗೆ ಬಲಗೈಯಿಂದ ಹೋಡೆದನು. ಶೀವಾನಂದ ಕಮ್ಮಾರ ಇನ್ನುವವನು ಹಿಂದಿನಿಂದ ಬಂದು ನನಗೆ ಓದ್ದಿರುತ್ತಾನೆ. ಅವರಿಬ್ಬರೂ ನನ್ನನ್ನು ಉಳಿದ 3 ಜನರ ಕೊಟ್ಟು ನನ್ನನ್ನು ಚೆನ್ನಾಗಿ ಹೊಡೆಯಿರಿ ಎಂದು ಹೇಳಿ ಹೋದರು. ನನಗೆ 3 ಜನ ಕಬ್ಬಿಣ ರೋಡನಿಂದ ಮೈ, ಕಾಲಿಗೆ, ತಲೆಗೆ ಹೋಡೆದಿರುತ್ತಾರೆ. ತಲೆಗೆ ಕಬ್ಬಿಣ ರೋಡನಿಂದ ಹೋಡೆದ ಕಾರಣ ರಕ್ತದ ಗಾಯವಾಗಿತ್ತು. ಆದ್ದರಿಂದ ನಾನು ಮಾಳಮಡ್ಡಿಯಲ್ಲಿರುವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೆನೆ. ನಾನು ಅವರಿಗೆ ಹೋಡೆಯಬೇಡಿ ಎಂದು ಕೇಳಿದರು ಕೂಡ ನನ್ನ ಮಾತು ಕೇಳದೆ ನನ್ನನ್ನು ಹೋಡೆದಿರುತ್ತಾರೆ. ಆರೋಪಿತ ಮತ್ತು ಇತರರು ನನಗೆ ಪೊಲೀಸ ದೂರು ನೀಡಿದರೆ ಜೀವಂತ ಬಿಡುವುದಿಲ್ಲ ಎಂದು ಧಮಕಿ ಹಾಕಿರುತ್ತಾರೆ. ಹಾಗೂ ಅವಾಚ್ಯಶಬ್ದಗಳಿಂದ ಬೈದಿರುತ್ತಾರೆ. ಹಲ್ಲೆಯಿಂದ ನಾನು ಪ್ರಜ್ಞೆ ತಪ್ಪಿ ಬಿದ್ದೆನು. ಪರಿಕ್ಷೆಗೆ ಬರೆಯಲು ಬಂದು ಇತರ ವಿದ್ಯಾರ್ಥಿಗಳು ನನ್ನನ್ನು ಆಸ್ಪತ್ರೆಗೆ ಸೇರಿಸಿರುತ್ತಾರೆ. ದಿಃ 26-03-2023 ರಂದು ದೂರು ನೀಡಿರುತ್ತೆನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು, ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಾನು ಆರೋಪಿತರಿಗೆ ಹೆದರಿ

ಮನೆಯಲ್ಲಿ ವಿಷಯ ಹೇಳಿರಲಿಲ್ಲ. ನಂತರ ತಂದೆ ತಾಯಿಗೆ ವಿಷಯ ತಿಳಿಸಿದ ನಂತರ ತಡವಾಗಿ ಪೊಲೀಸ ಠಾಣೆಯಲ್ಲಿ ದೂರು ನೀಡಿರುತ್ತೇನೆ. ಘಟನೆಯ ಸ್ಥಳವನ್ನು ನಾನೇ ದಿಃ27-03-2023 ತೋರಿಸಿರುತ್ತೇನೆ. ಗುನ್ಹಾ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿರುತ್ತಾರೆ. ಮತ್ತು ಪೋಟೊ ತೆಗೆದಿರುತ್ತಾರೆ. ಪಂಚನಾಮೆಯನ್ನು ನಿ.ಪಿ.2 ಎಂದು ಗುರುತಿಸಲಾಯಿತು. ನನ್ನನ್ನು ಹೋಡೆದ ಕಬ್ಬಿಣದ ರಾಡ ಸ್ಥಳದಲ್ಲಿ ಬಿದ್ದಿತ್ತು ಅದನ್ನು ನಾನು ಪಂಚನಾಮೆಯ ಕಾಲಕ್ಕೆ ಗುರುತಿಸಿರುತ್ತೇನೆ. ಕಬ್ಬಿಣದ ರಾಡನ್ನು ಪೊಲೀಸರು ಜಪ್ತು ಮಾಡಿರುತ್ತಾರೆ. ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ . ನನ್ನ ಸಹಿಯನ್ನು ನಿ.ಪಿ.2 (ಎ) ಎಂದು ಗುರುತಿಸಲಾಯಿತು.

ನನ್ನ ಮೇಲೆ ಹಲ್ಲೆ ಮಾಡಿದ ಇನ್ನೊಬ್ಬ ವ್ಯಕ್ತಿಯಾದ ಶೀವಾನಂದ ನಾಗಪ್ಪ ಕಮ್ಮಾರ ಇತನನ್ನು ನೋಡಿದರೆ ಗುರುತಿಸುತ್ತೇನೆ. ನನ್ನನ್ನು ಕರೆದುಕೊಂಡ ಹೋದ ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಆತನ ಹೆಸರು ಮತ್ತು ವಿಳಾಸ ಗೊತ್ತಿರುವುದಿಲ್ಲ. ಇನ್ನಿಬ್ಬರನ್ನು ಗುರುತಿಸಲು ಆಗುವುದಿಲ್ಲ ಮತ್ತು ಅವರ ಹೆಸರು ಮತ್ತು ವಿಳಾಸ ಗೊತ್ತಿರುವುದಿಲ್ಲ. ಮುದ್ದೇಮಾಲನ್ನು ನೋಡಿದರೆ ಗುರುತಿಸುತ್ತೇನೆ. ನನ್ನನ್ನು ಹೋಡೆಯಲು ಉಪಯೋಗಿಸಿದ ಕಬ್ಬಿಣದ ರಾಡನ್ನು ನೋಡಿದರೆ ಗುರುತಿಸುತ್ತೇನೆ. ಈಗ ನೋಡುತ್ತಿರುವ ಕಬ್ಬಿಣದ ರಾಡ ಆ ದಿನ ಆರೋಪಿತರು ನನ್ನನ್ನು ಹೊಡೆಯಲು ಉಪಯೋಗಿಸಿದ ಕಬ್ಬಿಣ ರಾಡನ್ನು ಎಮ್ ಓ 1 ಎಂದು

ಗುರುತಿಸಲಾಯಿತು. ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದಿರುವ ಆರೊಪಿತನು ಆ ದಿನ ಹಲ್ಲೆ ಮಾಡಿದ ವ್ಯಕ್ತಿ ಆಗಿರುತ್ತಾನೆ. ಹಲ್ಲೆ ಮಾಡಿದ ಇನ್ನೊಬ್ಬ ವ್ಯಕ್ತಿ ಶೀವಾಂದ ನಾಗಪ್ಪ ಕಮ್ಮಾರ ಇತನು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಲಿಂಗನಕೊಪ್ಪ ಗ್ರಾಮದ ನಿವಾಸಿ ಆಗಿರುತ್ತಾನೆ. ನನ್ನನ್ನು ಆರೋಪಿತರ ಗುಂಪಿನಲ್ಲಿ ಸೇರಲು ಕೇಳಿದ್ದರು ನಾನು ನಿರಾಕರಿಸಿದ ಕಾರಣ ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದುಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.